KADG320036052025

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ. ನ್ಯಾಯಾಲಯ, ಹರಿಹರ**

**ಉಪಸ್ಥಿತರು : ಶ್ರೀ ಬೀರಪ್ಪ ಕಾಂಬ್ಳೆ,**
**ಬಿ.ಎ,. ಎಲ್‌ಎಲ್.ಬಿ.**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ. ದ. ನ್ಯಾ. ದಂ. ನ್ಯಾಯಾಲಯ, ಹರಿಹರ**
**C/c 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ. ದ. ನ್ಯಾ. ದಂ. ನ್ಯಾಯಾಲಯ, ಹರಿಹರ**

**ಅಪರಾಧ ಪ್ರಕರಣ ಸಂಖ್ಯೆ : 3195/2025**

**ದಿನಾಂಕ 21 ನೇ ಜುಲೈ, 2026 ರಂದು**

ಫಿರ್ಯಾದುದಾರರು:
ಸರ್ಕಾರದ ಪರವಾಗಿ ಮಲೇಬೆನ್ನೂರು ಪೊಲೀಸ್ ಠಾಣೆ,
ಹರಿಹರ.

**(ಅಭಿಯೋಜನ ಪರ, ಸರ್ಕಾರಿ ಸಹಾಯಕ ಅಭಿಯೋಜಕರು)**

**ವಿರುದ್ಧ**

ಆರೋಪಿ:
ಅಶೋಕ ತಂದೆ ಬೀರಪ್ಪ ಸಿದ್ದಭರಮಪ್ಪನವರ್, 40 ವರ್ಷ, ಕೃಷಿಕರು,
ವಾಸ: ಉಕ್ಕಡಗಾತ್ರಿ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ.

**(ಆರೋಪಿ ಪರ ಶ್ರೀ ಜಿ.ಕೆ.ಜಿ., ವಕೀಲರು)**

| | |
|---|---|
| ಘಟನೆ ಸಂಭವಿಸಿದ ದಿನಾಂಕ | 19.07.2024 |
| ವರದಿಯಾದ ದಿನಾಂಕ | 21.07.2024 |
| ಫಿರ್ಯಾದಿದಾರರ ಹೆಸರು | ಅನಂತ್ ಕುಮಾರ ಪಿ.ವಿ. |
| ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 18.07.2026 |
| ಸಾಕ್ಷಿ ವಿಚಾರಣೆ ಮುಗಿಸಿದ ದಿನಾಂಕ | 18.07.2026 |
| ಆರೋಪಗಳು | ಭಾರತೀಯ ನ್ಯಾಯ ಸಂಹಿತೆ ಕಲಂ. 329(3), 324(4) ರಡಿಯಲ್ಲಿ |
| ನ್ಯಾಯಾಧೀಶರು ತೀರ್ಮಾನ | ನಿರ್ದೋಷಿಯೆಂದು ಪರಿಗಣಿಸಿದೆ |
| ತೀರ್ಮಾನವಾದ ದಿನಾಂಕ | 21.07.2026 |

**::ತೀರ್ಪು::**

ಈ ಪ್ರಸ್ತುತ ಪ್ರಕರಣವನ್ನು ಪೊಲೀಸ್ ಇನ್ಸ್‌ಪೆಕ್ಟರ್, ಮಲೇಬೆನ್ನೂರು ಪೊಲೀಸ್ ಠಾಣೆ, ಮಲೇಬೆನ್ನೂರು ಇವರು ಆರೋಪಿ ರವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ. 329(3), 324(4) ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂದು ಆರೋಪಿಸಿ ಆರೋಪಿತನ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನ ಪಕ್ಷದವರ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆಃ**

ಆರೋಪಿಗೆ ಹಾಗೂ ಚಾಸಾ.1 ರವರಿಗೂ ಹಿಂದೆ ಸ್ವತ್ತಿನ ವಿಚಾರದಲ್ಲಿ ಮನಸ್ತಾಪ ಇದ್ದು, ಇದೇ ಉದ್ದೇಶದಿಂದ ದಿನಾಂಕಃ 19.07.2024 ರಂದು ಸಂಜೆ

7.00 ಗಂಟೆ ಸಮಯದಲ್ಲಿ ಚಾಸಾ.1 ರವರ ಬಾಬ್ತು ಉಕ್ಕಡಗಾತ್ರಿ ಗ್ರಾಮದ ರೀ.ಸ.ನಂ:41/12 ನೇ ಮತ್ತು ಚಾಸಾ.4 ರವರ ಬಾಬ್ತು ರೀ.ಸ.ನಂ:41/14 ನೇ ಅಡಿಕೆ ತೋಟಗಳಲ್ಲಿ ಆರೋಪಿತನು ಅಕ್ರಮ ಪ್ರವೇಶ ಮಾಡಿ ಚಾಸಾ.1 ರವರ ಒಟ್ಟು 17 ಅಡಿಕೆ ಗಿಡಗಳನ್ನು ನಾಶಮಾಡಿ ರೂ.7,180/- ನಷ್ಟವನ್ನು ಹಾಗೂ ಚಾಸಾ.4 ರವರ 37 ಅಡಿಕೆ ಗಿಡಗಳನ್ನು ನಾಶಮಾಡಿ ರೂ.7,983/- ನಷ್ಟ ಒಟ್ಟು ರೂ.15,163/- ನಷ್ಟವನ್ನು ಉಂಟು ಮಾಡಿರುವುದು ತನಿಖೆಯಿಂದ ದೃಡಪಟ್ಟ ಮೇರೆಗೆ ಆರೋಪಿ ವಿರುದ್ಧ ಮೇಲ್ಕಂಡ ಕಲಂಗಳ ಅನ್ವಯ ದೋಷಾರೋಪಣಪಟ್ಟಿ ಸಲ್ಲಿಸಲಾಗಿದೆ.

**3.** ದೋಷಾರೊಪಣಾ ಪತ್ರ ಸ್ವೀಕರಿಸಿದ ನಂತರ ಈ ನ್ಯಾಯಾಲಯವು ಆರೋಪಿತನ ವಿರುದ್ಧ ಸಂಜ್ಞೆಯನ್ನು ತೆಗೆದುಕೊಂಡಿರುತ್ತದೆ. ಆರೋಪಿ ವಕೀಲರ ಮುಖಾಂತರ ಜಾಮೀನು ಅರ್ಜಿ ಸಲ್ಲಿಸಿ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡಿರುತ್ತಾರೆ. ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ. 230 ರಡಿಯಲ್ಲಿ ತಿಳಿಸಿರುವಂತೆ ಅಭಿಯೋಜನಾ ಕೇಸಿನ ದಾಖಲೆಗಳ ನಕಲುಗಳನ್ನು ಆರೋಪಿತನಿಗೆ ನೀಡಿ, ದೋಷಾರೋಪಣೆ ರಚಿಸುವ ಪೂರ್ವದಲ್ಲಿ ವಾದ ಕೇಳಿ ನಂತರ, ಅವರ ವಿರುದ್ಧದ ಆರೋಪಣೆಯನ್ನು ತಯಾರಿಸಿ, ಓದಿ ವಿವರಿಸಲಾಗಿ ಆರೋಪಿತನು ತಮ್ಮ ವಿರುದ್ಧದ ಆರೋಪಗಳನ್ನು ಅಲ್ಲಗೆಳೆದಿದ್ದು, ಆರೋಪಗಳು ವಿಚಾರಣೆಯಾಗಲೆಂದು ಕೇಳಿಕೊಂಡ ಮೇರೆಗೆ ಅಧಿವಿಚಾರಣೆ ಮಾಡಲಾಯಿತು.

**4.** ತಮ್ಮ ಪ್ರಕರಣವನ್ನು ಬೆಂಬಲಿಸಿ ಅಭಿಯೋಜನೆಯವರು 02 ಸಾಕ್ಷಿದಾರರನ್ನು ಪ್ರಾ.ಸಾ-01 ಮತ್ತು ಪ್ರಾ.ಸಾ-02 ರವರನ್ನು ವಿಚಾರಣೆ ಮಾಡಿ, ಅವರ ಮೂಲಕ ನಿಪಿ-1 ರಿಂದ 4 ದಾಖಲಾತಿಗಳನ್ನು ತಮ್ಮ ಸಾಕ್ಷ್ಯದಲ್ಲಿ ಗುರುತಿಸಿಕೊಂಡಿರುತ್ತಾರೆ. ಪ್ರಾ.ಸಾ.1 ಮತ್ತು ಪ್ರಾ.ಸಾ.2 ರವರು ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದು, ಆರೋಪಿತನ ವಿರುದ್ಧ ಯಾವುದೇ ಸಾಕ್ಷ್ಯ ಕಂಡುಬರದ ಹಿನ್ನಲೆಯಲ್ಲಿ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ. 351 ರಡಿಯಲ್ಲಿ ಆರೋಪಿತನ ಹೇಳಿಕೆಯನ್ನು ದಾಖಲಿಸಿಕೊಳ್ಳುವ ಹಂತವನ್ನು ಕೈಬಿಡಲಾಗಿದೆ.

**5.** ಸರ್ಕಾರದ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರು ಹಾಗೂ ಆರೋಪಿತನ ಪರವಾಗಿ ಶ್ರೀ. ಜಿ.ಕೆ.ಜಿ., ವಕೀಲರ ವಾದ ಕೇಳಿ ಕಡತದ ಪರಿಶೀಲನೆ ಮಾಡಲಾಗಿ ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಬಂದಿರುತ್ತವೆ.

**6.** ಈ ಪ್ರಕರಣದಲ್ಲಿ ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸುತ್ತವೆಃ

**-:ಅಂಶಗಳು:-**

1. ಆರೋಪಿತನಿಗೆ ಹಾಗೂ ಚಾಸಾ.1 ರವರಿಗೂ ಈ ಹಿಂದೆ ಸ್ವತ್ತಿನ ವಿಚಾರದಲ್ಲಿ ಮನಸ್ತಾಪ ಇರುತ್ತದೆ. ಇದೇ ಉದ್ದೇಶದಿಂದ ದಿನಾಂಕಃ 19.07.2024 ರಂದು ಸಂಜೆ

7.00 ಗಂಟೆ ಸಮಯದಲ್ಲಿ ಚಾಸಾ.1 ರವರ ಬಾಬ್ತು ಮಲೇಬೆನ್ನೂರು ಪೊಲೀಸ್ ಠಾಣಾ ವ್ಯಾಪ್ತಿಯ ಉಕ್ಕಡಗಾತ್ರಿ ಗ್ರಾಮದ ರೀ.ಸ.ನಂ 41/12 ಮತ್ತು ಚಾಸಾ.4 ರವರ ಬಾಬ್ತು ರೀ.ಸ.ನಂ 41/14 ನೇ ಅಡಿಕೆ ತೋಟಗಳಲ್ಲಿ ಆರೋಪಿತನು ಅಕ್ರಮ ಪ್ರವೇಶ ಮಾಡಿರುತ್ತೀರಿ. ಆದ್ದರಿಂದ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ. 329(3) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನೆಯವರು ಯುಕ್ತಾ ಸಂಶಯಾತೀತಿವಾಗಿ ರುಜುವಾತು ಪಡಿಸಿದ್ದಾರೆಯೇ?

2. ಅದೇ ರೀತಿ ಮೇಲೆ ಹೇಳಿದ ದಿವಸ ವೇಳೆ ಮತ್ತು ಸ್ಥಳದಲ್ಲಿ ಆರೋಪಿತನು ಚಾಸಾ.1 ರವರ ಒಟ್ಟು 17 ಅಡಿಕೆ ಗಿಡಗಳನ್ನು ನಾಶಮಾಡಿ ರೂ.7,180/- ನಷ್ಟ ಮಾಡಿರುತ್ತೀಯ ಹಾಗೂ ಚಾಸಾ.4 ರವರ 37 ಅಡಿಕೆ ಗಿಡಗಳನ್ನು ನಾಶಮಾಡಿ ರೂ.7,983/- ರಷ್ಟು ನಷ್ಟ ಮಾಡಿರುತ್ತೀಯ, ಚಾಸಾ.1 ಮತ್ತು ಚಾಸಾ.4 ರವರ ಒಟ್ಟು ರೂ.15,163/- ರಷ್ಟು ನಷ್ಟವನ್ನುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ. 324(4) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನೆಯವರು ಯುಕ್ತಾ ಸಂಶಯಾತೀತಿವಾಗಿ ರುಜುವಾತು ಪಡಿಸಿದ್ದಾರೆಯೇ?

3. ಏನು ಆದೇಶ ಅಥವಾ ಶಿಕ್ಷೆ?

**7.** ಅಭಿಯೋಜನಾ ಪರ ಹಾಜರು ಪಡಿಸಲಾದಂತಹ ಮೌಖಿಕ ಸಾಕ್ಷ್ಯಗಳನ್ನು ದಾಖಲೆಗಳನ್ನು ಮತ್ತು ಉಭಯ ಪಕ್ಷಗಳ ಪರ ಮಾನ್ಯ ವಕೀಲರುಗಳ ವಾದವನ್ನು ಸಂಪೂರ್ಣವಾಗಿ ಪರಿಗಣಿಸಿ ಮೇಲಿನ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿದೆ.

**ಅಂಶ 1 ಮತ್ತು 2 - ನಕಾರಾತ್ಮಕವಾಗಿ**
**ಅಂಶ 3 - ಅಂತಿಮ ಆದೇಶನುಸಾರವಾಗಿ**

**:ಕಾರಣಗಳು:**

**8.** **ಅಂಶ 1 ಮತ್ತು 2 :-** ಅಂಶ 1 ಮತ್ತು 2 ಇವು ಒಂದನ್ನೊಂದು ಅವಲಂಬಿಸಿದ್ದು, ಇವುಗಳನ್ನು ಉತ್ತರಿಸುವಾಗ ಒಂದೆ ರೀತಿಯಾದಂತಹ ಚರ್ಚೆ ಹಾಗೂ ವಿಮರ್ಶೆ ಅವಶ್ಯಕತೆ ಇರುತ್ತದೆ. ಆದ್ದರಿಂದ ಅವುಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಅವುಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿರುತ್ತದೆ. ಅಭಿಯೋಜನೆಯವರು ಆರೋಪಿತನ ಮೇಲಿನ ಆರೋಪಗಳನ್ನು ಸಾಭೀತುಪಡಿಸಲು ಪ್ರಾ.ಸಾ. 01 ಮತ್ತು 2 ರವರನ್ನು ವಿಚಾರಣೆ ಮಾಡಿ, ಅವರ ಮೂಲಕ ನಿಪಿ-01 ರಿಂದ 04 ರ ದಾಖಲಾತಿಗಳನ್ನು ತಮ್ಮ ಸಾಕ್ಷ್ಯದಲ್ಲಿ ಗುರುತಿಸಿಕೊಂಡಿರುತ್ತಾರೆ.

**9.** ಚಾಸಾ.1/ಪ್ರಾಸಾ.1 ರವರು ದೂರುದಾರರಾಗಿದ್ದು ಹಾಗೂ ಚಾಸಾ.4/ಪ್ರಾಸಾ.2 ರವರು ಗಾಯಾಳುಗಳಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತನಗೆ ಪ್ರಕರಣದ ಬಗ್ಗೆ ಮಾಹಿತಿ ಇರುವುದಿಲ್ಲ. ಆರೋಪಿಯು ತಮ್ಮ ಜಮೀನಿನಲ್ಲಿ ಯಾವುದೇ ಗಿಡಗಳನ್ನು ನಾಶಪಡಿಸಿರುವುದಿಲ್ಲ. ತಾನು ಪೊಲೀಸ್ ಠಾಣೆಗೆ ಹೋದಾಗ

ಪೊಲೀಸರು ಒಂದು ದಾಖಲೆಗೆ ಸಹಿ ಮಾಡಿಸಿರುತ್ತಾರೆ. ಅದರಲ್ಲಿ ಬರೆದಿರುವ ವಿಷಯ ತನಗೆ ಗೊತ್ತಿರುವುದಿಲ್ಲ. ತಾನು ಪೊಲೀಸರಿಗೆ ಯಾವುದೇ ಸ್ಥಳವನ್ನು ತೋರಿಸಿರುವುದಿಲ್ಲ. ಪೊಲೀಸರು ಪಂಚನಾಮೆ ಮಾಡಿರುವುದಿಲ್ಲ. ಇವರ ಈ ಸಾಕ್ಷ್ಯವು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿರುವುದರಿಂದ ಮತ್ತು ಸದರಿ ಸಾಕ್ಷಿದಾರರು ಅಭಿಯೋಜನೆಯನ್ನು ಬೆಂಬಲಿಸದ ಕಾರಣ ಸ.ಸ.ಅ. ರವರು ಪಾಟೀಸವಾಲಿಗೊಳಪಡಿಸಿದ್ದು, ಪಾಟೀಸವಾಲಿನಲ್ಲಿ ಅಭಿಯೋಜನೆಗೆ ಸಹಾಯಕವಾಗುವಂತಹ ಯಾವುದೇ ಸಂಗತಿಗಳು ಕಂಡುಬಂದಿರುವುದಿಲ್ಲ. ಬದಲಾಗಿ ಇವರು ಆರೋಪಿತನೊಂದಿಗೆ ರಾಜೀ ಮಾಡಿಕೊಂಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ.

**10.** ಈ ಪ್ರಕರಣದಲ್ಲಿ ಗಮನಿಸಬೇಕಾದ ಪ್ರಮುಖ ಅಂಶಗಳೇನೆಂದರೆ, ಈ ಪ್ರಕರಣದ ಪ್ರಾ.ಸಾ.1 ಮತ್ತು ಪಾ.ಸಾ.2 ರವರು ಅಭಿಯೋಜನೆಯನ್ನು ಬೆಂಬಲಿಸಿರುವುದಿಲ್ಲ, ಪ್ರಾಸಾ.1 ಮತ್ತು 2 ರವರು ಪ್ರತಿಕೂಲವಾಗಿ ಸಾಕ್ಷಿ ನುಡಿದ ಕಾರಣ ಅಭಿಯೋಜನೆಯು ಇವರುಗಳನ್ನು ಪಾಟೀಸವಾಲಿಗೊಳಪಡಿಸಿದ್ದು, ಪಾಟೀಸವಾಲಿನಲ್ಲಿ ಅಭಿಯೋಜನೆಗೆ ಸಹಾಯಕವಾಗುವಂತಹ ಯಾವ ಸಂಗತಿಗಳು ಹೊರಬಂದಿರುವುದಿಲ್ಲ. ಬದಲಾಗಿ ಇವರು ಆರೋಪಿಯೊಂದಿಗೆ ಪರಸ್ಪರ ರಾಜೀ ಮಾಡಿಕೊಂಡಿರುವುದಾಗಿ ಒಪ್ಪಿರುತ್ತಾರೆ. ಹೀಗೆ ರಾಜೀ ಮಾಡಿಕೊಂಡ ಹಿನ್ನೆಲೆಯಲ್ಲಿ ಆರೋಪಿಯ ಹಿತಾಸಕ್ತಿಗೆ ವಿರುದ್ಧವಾದ ಯಾವುದೇ ಸಾಕ್ಷ್ಯ ಹೇಳಿಕೆ ಕಂಡು ಬಂದಿರುವುದಿಲ್ಲ. ಈ ಸಾಕ್ಷಿದಾರರುಗಳನ್ನು ಹೊರತಾಗಿ ಉಳಿದ ಎಲ್ಲಾ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಆರೋಪಿತನ ಮೇಲಿನ ಆರೋಪಗಳನ್ನು

ಸಂಶಯಾತೀತವಾಗಿ ಸಾಭೀತುಪಡಿಸುವ ಯಾವುದೇ ಸಾಧ್ಯತೆಗಳು ಇಲ್ಲದ ಕಾರಣ ನ್ಯಾಯಾಲಯವು ಉಳಿದ ಸಾಕ್ಷಿದಾರರ ವಿಚಾರಣೆಯನ್ನು ಕೈಬಿಟ್ಟಿರುತ್ತದೆ. ಈ ಪ್ರಕರಣದ ಪ್ರಮುಖ ಸಾಕ್ಷಿದಾರರ ಪ್ರತಿಕೂಲ ಸಾಕ್ಷ್ಯದಿಂದ ಅಭಿಯೋಜನೆಯು ಆರೋಪಿ ಮೇಲಿನ ಆರೋಪಗಳನ್ನು ಸಂಶಯಾತೀತವಾಗಿ ಸಾಭೀತುಪಡಿಸುವಲ್ಲಿ ವಿಫಲವಾಗಿದೆ. ಆದ್ದರಿಂದ **ಅಂಶ.1 ಮತ್ತು 2 ಅನ್ನು "ನಕಾರಾತ್ಮಕವಾಗಿ"** ಉತ್ತರಿಸುತ್ತೇನೆ.

**11. <u>ಅಂಶ ಸಂ.3:</u>** ಈಗಾಗಲೇ ಈ ಮೇಲಿನ ಅಂಶ 1 ಮತ್ತು 2 ನ್ನು ನಕಾರಾತ್ಮಕವಾಗಿ ಉತ್ತರಿಸಿರುವುದರಿಂದ ಈ ಕೆಳಕಂಡಂತೆ ಆದೇಶಿಸಲಾಗಿದೆ.

## :ಆದೇಶ:

ಭಾರತೀಯ ನಾಗರೀಕಾ ಸುರಕ್ಷಾ ಸಂಹಿತೆ 271(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿಯನ್ನು ಭಾರತೀಯ ನ್ಯಾಯ ಸಂಹಿತೆ ಕಲಂ. 329(3), 324(4) ರಡಿಯಲ್ಲಿನ ಅಪರಾಧಗಳಿಂದ ಆರೋಪಿಯನ್ನು ದೋಷಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿ ಜಾಮೀನಿನ ಮೇಲೆ ಬಿಡುಗಡೆಯಾಗಿರುವುದರಿಂದ ಸದರಿಯವರ ಮುಚ್ಚಳಿಕೆ ಮತ್ತು ಭದ್ರತೆಗಳನ್ನು ರದ್ದು ಮಾಡಲಾಗಿದೆ.

ಆರೋಪಿಯು ನ್ಯಾಯಾಲಯದ ಇಚ್ಛೆಯಂತೆ ಉನ್ನತ ನ್ಯಾಯಾಲಯದ ಮುಂದೆ ಈ ತೀರ್ಪಿನ ವಿರುದ್ಧ ಮೇಲ್ಮನವಿ ಅಥವಾ ಯಾವುದೇ ಅರ್ಜಿಯ ಸಮಯದಲ್ಲಿ ತಿಳುವಳಿಕೆ ಪಡೆದ ನಂತರ ಹಾಜರಾಗಲು ತಲಾ ೫೦,೦೦೦/- ಮುಚ್ಚಳಿಕೆ

ಬರೆದುಕೊಟ್ಟಿದ್ದು ಈ ಮುಚ್ಚಳಿಕೆಯು ಮುಂದಿನ ಆರು ತಿಂಗಳ ಅವಧಿಯವರೆಗೆ ಭಾರತೀಯ ನಾಗರೀಕಾ ಸುರಕ್ಷಾ ಸಂಹಿತೆ 481 ರಡಿಯಲ್ಲಿ ಜಾರಿಯಲ್ಲಿರುತ್ತದೆ.

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕೀಕರಿಸಿದ್ದು ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ಇಂದು ದಿ: **21** ನೇ ಜುಲೈ**, 2026** ರಂದು ತೀರ್ಪನ್ನು ಘೋಷಿಸಲಾಯಿತು)

ಸಹಿ/-
**(ಶ್ರೀ ಬೀರಪ್ಪ ಕಾಂಬ್ಳೆ,)**
**C/c 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.ನ್ಯಾಯಾಲಯ, ಹರಿಹರ.**

**:ಅನುಬಂಧ:**

**:ಅಭಿಯೋಜನೆಯವರ ಪರ ಸಾಕ್ಷಿದಾರರ ಪಟ್ಟಿ -**

ಪ್ರಾ.ಸಾ.1- ಅನಂತಕುಮಾರ .ಪಿ.ವಿ

ಪ್ರಾ.ಸಾ.2- ಶ್ರೀಕಾಂತ

**:ಅಭಿಯೋಜನೆಯವರ ಪರ ದಾಖಲೆಗಳ ಪಟ್ಟಿ -**

ನಿ.ಪಿ.1- ದೂರು,

ನಿ.ಪಿ.1(ಎ)- ಪ್ರಾಸಾ.1 ರವರ ಸಹಿ,

ನಿ.ಪಿ.2-ಕೃತ್ಯ ಸ್ಥಳದ ಪಂಚನಾಮೆ,

ನಿ.ಪಿ.2(ಎ)- ಪ್ರಾಸಾ.1 ರವರ ಸಹಿ,

ನಿ.ಪಿ.3- ಛಾಯಾಚಿತ್ರ,

ನಿ.ಪಿ.4- ಪ್ರಾಸಾ.2 ರವರ ಹೇಳಿಕೆ,

**:**ಅಭಿಯೋಜನೆಯವರ ಪರ ಮುದ್ದೆಮಾಲುಗಳ ಪಟ್ಟಿ -ಇಲ್ಲ

**:**ಆರೋಪಿಯ ಪರ ವಿಚಾರಣೆ ಮಾಡಿದ ಸಾಕ್ಷಿದಾರರು-ಇಲ್ಲ

**:**ಆರೋಪಿಯ ಪರ ದಾಖಲೆಗಳ ಪಟ್ಟಿ -ಇಲ್ಲ

ಸಹಿ/-

**(ಶ್ರೀ** ಬೀರಪ್ಪ ಕಾಂಬ್ಳೆ**,)**

**C/c 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ನ್ಯಾಯಾಲಯ, ಹರಿಹರ.**